

بِسْمِ اللّٰہِ الرَّحْمٰنِ الرَّحِیْم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 23-08-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔ أَمَّا بَعْدُ

فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ ۝ اَلرَّحْمٰنِ الرَّحِيْمِ ۝ مٰلِكِ يَوْمِ الدِّيْنِ ۝ إِيَّاكَ نَعْبُدُ وَإِيَّاكَ نَسْتَعِيْنُ ۝

اِهْدِنَا الصِّرَاطَ الْمُسْتَقِيْمَ ۝ صِرَاطَ الَّذِيْنَ أَنْعَمْتَ عَلَيْهِمْ ۝ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۝

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ಮೊದಲು ಪ್ರಸ್ತಾಪಿಸುವ ಬದರಿ ಸಹಾಬಿಯ ಹೆಸರು ಹಝ್ರತ್ ಆಸಿಮ್ ಬಿನ್ ಅದೀ(ರ). ಅವರು ಹಝ್ರತ್ ಮುಯಿನ್ ಬಿನ್ ಅದೀ ರವರ ಸಹೋದರರನಾಗಿದ್ದರು. ಅವರು ಮಧ್ಯ ಎತ್ತರ ಹೊಂದಿದ್ದರು. ಕೂದಲಿಗೆ ಮೆಹಂದಿ ಹಚ್ಚುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದರ್ ಯುದ್ಧಕ್ಕೆ ಹೊರಡುವ ಸಮಯದಲ್ಲಿ ಖುಬಾ ಮತ್ತು ಮದೀನದ ಎತ್ತರವಾಗಿರುವ ಪ್ರದೇಶವಾದ ಆಲಿಯದಲ್ಲಿ ಅವರನ್ನು ಅಮೀರ್ ಆಗಿ ನೇಮಿಸಿದ್ದರು. ಇನ್ನೊಂದು ವರದಿ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದರ್‌ಗೆ ಹೋಗುವಾಗ ರೌಹ ಎಂಬ ಸ್ಥಳದಲ್ಲಿ ಹಝ್ರತ್ ಆಸಿಮರನ್ನು ಆಲಿಯದ ಅಮೀರನಾಗಿ ನಿಶ್ಚಯಿಸಿ ಮದೀನಕ್ಕೆ ಕಳುಹಿಸಿದ್ದರು. ಆದರೆ ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದವರಲ್ಲಿ ಸೇರಿದರೆಂದು ಗಣಿಸಲ್ಪಟ್ಟರು. ಬದರ್ ಯುದ್ಧದಲ್ಲಿ ದೊರೆತ ಸಂಪತ್ತನಲ್ಲಿ ಅವರಿಗೂ ಪಾಲು ನೀಡಲಾಯಿತು. ಅವರು ಬದರ್, ಉಹುದ್ ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಹಿಜರಿ 45ರಲ್ಲಿ ಹಝ್ರತ್ ಮುಆವಿಯರ ಆಡಳಿತೆ ಕಾಲದಲ್ಲಿ ಮದೀನದಲ್ಲಿ ನಿಧನ ಹೊಂದಿದರು. ಆಗ ಅವರ ಪ್ರಾಯ 115 ವರ್ಷ. ಬೇರೆ ಕೆಲವರ ಅಭಿಪ್ರಾಯ ಪ್ರಕಾರ ಅವರು ಮೃತರಾಗುವಾಗ ಅವರ ಪ್ರಾಯ 120 ವರ್ಷ ಆಗಿತ್ತು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಂದಿಗೆ ತಬೂಕ್ ಯುದ್ಧಕ್ಕೆ ಸಿದ್ಧತೆ ನಡೆಸಲು ಆಜ್ಞಾಪಿಸಿದಾಗ ಅವರು ಐಶ್ವರ್ಯವಂತರೊಂದಿಗೆ ಅಲ್ಲಾಹನ ಮಾರ್ಗದಲ್ಲಿ ಹೋರಾಡಲು ಸಂಪತ್ತನ್ನು ಮತ್ತು ಸವಾರಿ ಮೃಗಗಳನ್ನು ಒದಗಿಸಲು ಅಪೇಕ್ಷಿಸಿದರು. ವಿವಿಧ ಜನರು ತಮ್ಮ ಸಾಂಪತ್ತಿಕ ಸ್ಥಿತಿಗೆ ಅನುಸಾರವಾಗಿ ತ್ಯಾಗಗಳನ್ನು ಮಾಡಿದರು. ಆ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ತಮ್ಮ ಮನೆಯಲ್ಲಿದ್ದ ಎಲ್ಲಾ ಸಂಪತ್ತನ್ನು ತಂದರು. ಅದರ ಮೌಲ್ಯ ನಾಲ್ಕು ಸಾವಿರ ದಿರ್‌ಹಮ್ ಆಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರೊಡನೆ, ನಿಮ್ಮ ಮನೆಯವರಿಗೋಸ್ಕರ ಏನಾದರೂ ಇರಿಸಿದ್ದೀರಾ? ಎಂದು ಕೇಳಿದರು. ಆಗ ಅವರು ಹೇಳಿದರು: ಮನೆಯವರಿಗೋಸ್ಕರ ಅಲ್ಲಾಹನನ್ನು ಮತ್ತು ಅವನ ರಸೂಲರನ್ನು ಬಿಟ್ಟು ಬಂದಿದ್ದೇನೆ.

ಹಝ್ರತ್ ಉಮರ್(ರ) ತಮ್ಮ ಮನೆಯಲ್ಲಿದ್ದ ಸಂಪತ್ತಿನ ಅರ್ಧಾಂಶ ತಂದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನಿಮ್ಮ ಮನೆಯವರಿಗೋಸ್ಕರ ಏನಾದರೂ ಬಿಟ್ಟು ಬಂದಿರುವಿರೋ? ಆಗ ಅವರು ಹೇಳಿದರು: ನಾನು ಸಂಪತ್ತಿನ ಅರ್ಧಾಂಶ ಬಿಟ್ಟು ಬಂದಿದ್ದೇನೆ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಒಂದು ನೂರು ಓಖಿಯ ಕೊಟ್ಟರು. ನಲ್ವತ್ತು ದಿರ್‌ಹಮ್‌ಗೆ ಒಂದು ಓಖಿಯ ಆಗುತ್ತದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಉಸ್ಮಾನ್ ಬಿನ್ ಅಫ್ಫಾನ್ ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್ ಭೂಮಿಯಲ್ಲಿರುವ ಅಲ್ಲಾಹನ ಖಜಾನೆಗಳಲ್ಲಿ ಸೇರಿರುವ ಖಜಾನೆಗಳಾಗಿದ್ದಾರೆ. ಅವರು ಅಲ್ಲಾಹನ ಸಂಪ್ರೀತಿ ಗಳಿಸಲು ಖರ್ಚು ಮಾಡುತ್ತಾರೆ. ಆ ಸಂದರ್ಭದಲ್ಲಿ ಮಹಿಳೆಯರು ಸಹ ತಮ್ಮ ಆಭರಣಗಳನ್ನು ನೀಡಿದರು. ಹಝ್ರತ್ ಆಸಿಮ್ ಬಿನ್ ಅದೀ ಎಪ್ಪತ್ತು ವಸಖ್ ಖರ್ಜೂರ ನೀಡಿದರು. ಒಂದು ವಸಖ್ ಎಂದರೆ 60 ಸಾಅ್. ಒಂದು ಸಾಅ್‌ಗೆ ಅಂದಾಜು ಎರಡುವರೆ ಸೇರು ತೂಕವಿದೆ. ಈ ರೀತಿ ಅವರು ನೀಡಿದ ಖರ್ಜೂರದ ಒಟ್ಟು ತೂಕ 262 ಮಣ ಆಗುತ್ತದೆ. ಒಂದು ಮಣಕ್ಕೆ ಅಂದಾಜು 40 ಕಿಲೋ ತೂಕವಿರುತ್ತದೆ. ಈ ರೀತಿ ಹಝ್ರತ್ ಆಸಿಮ್ ಬಹಳ ಹೆಚ್ಚು ತೂಕದ ಖರ್ಜೂರ ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಸ್‌ಜಿದ್ ಝಿರಾರನ್ನು ಧ್ವಂಸಗೊಳಿಸಲು ಆಜ್ಞಾಪಿಸಿದ್ದ ಸಹಾಬರಲ್ಲಿ ಹಝ್ರತ್ ಆಸಿಮ್ ಸಹ ಸೇರಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಮಸ್‌ಜಿದನ್ನು ಕೆಡವಿ ಹಾಕಿ ಸುಟ್ಟುಬಿಡಲು ಸಹಾಬರಿಗೆ ಆಜ್ಞಾಪಿಸಿದ್ದರು. ಅದನ್ನು ಸಹಾಬರು ಕೆಡವಿ ಸುಟ್ಟು ಹಾಕುವಾಗ ಆ ಮಸ್‌ಜಿದ್ ನಿರ್ಮಿಸಿದ ಜನರು ಅಲ್ಲಿದ್ದರು. ಅವರು ಅತ್ತಿತ್ತ ಓಡಿ ಹೋದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೆಡವಿ ಹಾಕಿದ ಆ ಮಸ್‌ಜಿದ್ ಇದ್ದ ಸ್ಥಳವನ್ನು ಹಝ್ರತ್ ಆಸಿಮ್‌ರಿಗೆ ಮನೆ ಕಟ್ಟಲಿಕ್ಕಾಗಿ ಕೊಡಲು ಇಚ್ಛಿಸಿದಾಗ, ಹಝ್ರತ್ ಆಸಿಮ್ ಹೇಳಿದರು: ನನಗೆ ಮನೆ ಇದೆ. ನನಗೆ ಆ ಸ್ಥಳದ ಬಗ್ಗೆ ಮುಜುಗರವೂ ಇದೆ. ಆದುದರಿಂದ ಆ ಸ್ಥಳವನ್ನು ಸಾಬಿತ್ ಬಿನ್ ಅಕ್‌ರಮರಿಗೆ ಕೊಡಿರಿ. ಅವರಿಗೆ ಮನೆ ಇಲ್ಲ. ಹಾಗೆ ಆ ಸ್ಥಳವನ್ನು ಹಝ್ರತ್ ಸಾಬಿತರಿಗೆ ನೀಡಲಾಯಿತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ದೆಹಲಿಗೆ ಹೋದಾಗ ಜಾಮಿಅ ಮಸ್‌ಜಿದನ್ನು ನೋಡಿ ಹೇಳಿದರು: ಇದು ಬಹಳ ದೊಡ್ಡ ಸುಂದರ ಮಸ್‌ಜಿದ್ ಆಗಿದೆ. ಆದರೆ ಮಸ್‌ಜಿದ್‌ಗಳ ಮೂಲ ಸೌಂದರ್ಯ ಕಟ್ಟಡಗಳಲ್ಲಿಲ್ಲ. ನಿಷ್ಠೆಯಿಂದ ನಮಾಝ್ ಮಾಡುವವರಲ್ಲಿ ಮಸ್‌ಜಿದ್‌ನ ಸೌಂದರ್ಯ ಅಡಕವಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಸಹ ಲೌಕಿಕವಾದ ಅಭಿಲಾಷೆ

ಹೊಂದಿದವರು ಒಂದು ಮಸ್‌ಜಿದ್ ನಿರ್ಮಿಸಿದ್ದರು. ಅದನ್ನು ಅಲ್ಲಾಹನ ಆಜ್ಞೆ ಪ್ರಕಾರ ಕೆಡವಿ ಹಾಕಲಾಯಿತು. ಮಸ್‌ಜಿದ್ ಬಗ್ಗೆ ಹೀಗೆ ಆಜ್ಞಾಪಿಸಲಾಗಿದೆ: ಮಸ್‌ಜಿದನ್ನು ತಖ್ವಕ್ಕೋಸ್ಕರ ನಿರ್ಮಿಸಬೇಕು ಎಂದು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು, ಪವಿತ್ರ ಖುರ್‌ಆನಿನ ವಚನ **ಲಿಮನ್ ಹಾರಬಲ್ಲಾಹು** ಬಗ್ಗೆ ವ್ಯಾಖ್ಯಾನಿಸುತ್ತಾ ಹೇಳಿದರು: ಇದು ಅಬೂ ಆಮಿರ್ ಬಗ್ಗೆ ಸೂಚಿಸುತ್ತದೆ. ಅವನು ಕ್ರೈಸ್ತ ಧರ್ಮ ವಿಶ್ವಾಸಿಯಾಗಿದ್ದನು. ಅವನ ಕುತಂತ್ರಗಳಲ್ಲಿ ಒಂದು ಹೀಗಿತ್ತು, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಮಸ್‌ಜಿದ್‌ನಲ್ಲಿ ನಮಾಝ್ ನಿರ್ವಹಿಸಬೇಕು. ಅನಂತರ ಕೆಲವು ಮುಸ್ಲಿಮರು ಅಲ್ಲಿಗೆ ನಮಾಝ್‌ಗೋಸ್ಕರ ಬರುತ್ತಾ ಇರಬೇಕು. ಆ ಮೂಲಕ ಮುಸ್ಲಿಮರಲ್ಲಿ ಒಡಕು ಉಂಟಾಗುವಂತೆ ನಾನು ಮಾಡುವೆನು ಎಂದು.

ನಾನು ಪ್ರಸ್ತಾಪಿಸುವ ಎರಡನೆಯ ಸಹಾಬಿ ಹಝ್ರತ್ ಅಮರ್ ಬಿನ್ ಔಫ್(ರ). ಅವರು ಮಕ್ಕದಲ್ಲಿ ಜನಿಸಿದರು. ಇಬ್ನುಸಅದ್ ಪ್ರಕಾರ ಅವರು ಯಮನ್ ನಿವಾಸಿಯಾಗಿದ್ದರು. ಅವರು ಆದ್ಯಕಾಲೀನ ಮುಸ್ಲಿಮರಲ್ಲಿ ಸೇರಿದ್ದರು. ಅವರು ಮದೀನಕ್ಕೆ ಹಿಜ್‌ರತ್ ಮಾಡಿದಾಗ ಹಝ್ರತ್ ಕುಲ್‌ಸುಮ್ ಬಿನ್ ಹದಮ್‌ರ ಮನೆಯಲ್ಲಿ ವಾಸಿಸಿದರು. ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಮೃತರಾದರು. ಹಝ್ರತ್ ಉಮರ್(ರ) ಅವರ ಜನಾಝ ನಮಾಝನ್ನು ನಿರ್ವಹಿಸಿದರು.

ಇನ್ನೊಬ್ಬ ಸಹಾಬಿ ಹಝ್ರತ್ ಮುಯಿನ್ ಬಿನ್ ಅದೀ(ರ). ಅವರು ಅನ್‌ಸಾರ್‌ಗಳ ಬನೂ ಅಮರ್ ಬಿನ್ ಔಫ್ ಗೋತ್ರದೊಂದಿಗೆ ಪ್ರತಿಜ್ಞಾಬದ್ಧರಾಗಿದ್ದರು. ಅವರು ಎಪ್ಪತ್ತು ಅನ್‌ಸಾರ್‌ಗಳೊಂದಿಗೆ ಬೈಅತ್ ಅಖಬದಲ್ಲಿ ಸೇರಿದ್ದರು. ಅವರು ಮುಸ್ಲಿಮರಾಗುವ ಮೊದಲೇ ಅರಬಿ ಭಾಷೆಯಲ್ಲಿ ಓದು ಬರಹ ಕಲಿತಿದ್ದರು. ಅವರು ಬದರ್, ಉಹುದ್, ಖಂದಕ್ ಮೊದಲಾದ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು.

ಹಝ್ರತ್ ಉಮರ್(ರ) ಹೇಳುತ್ತಾರೆ: ಹಝ್ರತ್ ನಬಿ ಕರೀಮ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ನಾನು ಹಝ್ರತ್ ಅಬೂಬಕರ್(ರ)ರೊಂದಿಗೆ ಹೇಳಿದೆ: ನೀವು ನಮ್ಮೊಂದಿಗೆ ನಮ್ಮ ಅನ್‌ಸಾರ್ ಸಹೋದರರನ್ನು ಭೇಟಿಯಾಗಲು ಬನ್ನಿರಿ. ನಾವು ಹೋದಾಗ ಬದರ್ ಯುದ್ಧದಲ್ಲಿ ಭಾಗವಹಿಸಿದ ಅನ್‌ಸಾರ್‌ಗಳ ಇಬ್ಬರು ಸಾತ್ವಿಕ ಮನುಷ್ಯರನ್ನು ನಾವು ಕಂಡೆವು. ಆ ಇಬ್ಬರ ಹೆಸರು ಹಝ್ರತ್ ಅವೀಮ್ ಬಿನ್ ಸಾಯಿದ ಮತ್ತು ಹಝ್ರತ್ ಮುಯಿನ್ ಬಿನ್ ಅದೀ ಎಂದು ವರದಿಯಾಗಿದೆ. ಹಝ್ರತ್ ಇಬ್ನು ಅಬ್ಬಾಸ್ ಹೇಳುತ್ತಾರೆ: ನಾನು ಒಮ್ಮೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರವರ ಮಿನಾದಲ್ಲಿರುವ ಮನೆಯಲ್ಲಿ ಇದ್ದೆ. ಆಗ ಅಬ್ದುರ್ರಹ್ಮಾನ್ ಬಿನ್ ಔಫ್ ಹಝ್ರತ್ ಉಮರ್ ಬಿನ್ ಖತ್ತಾಬರನ್ನು ಭೇಟಿಯಾಗಲು ಹೋಗಿದ್ದರು. ಅವರು ಮರಳಿ ಬಂದಾಗ ಹೇಳಿದರು: ಇಂದು ಅಮೀರುಲ್ ಮೂಮಿನೀನ್‌ರವರ ಬಳಿಗೆ ಬಂದ ವ್ಯಕ್ತಿಯನ್ನು ನೀವು ಸಹ ನೋಡಿದ್ದರೆ ಚೆನ್ನಾಗಿತ್ತು. ಆ ವ್ಯಕ್ತಿ ಹೇಳಿದರು: ಓ ಅಮೀರುಲ್ ಮೂಮಿನೀನ್, ನಿಮಗೆ ಆ ವ್ಯಕ್ತಿಯ ಬಗ್ಗೆ ತಿಳಿದಿದೆಯೇ ಅವನು ಹೇಳುತ್ತಾನೆ, ಉಮರ್ ಹೋದರೆ ನಾನು ಇಂತಿಂತಹ ವ್ಯಕ್ತಿಯನ್ನು ಬೈಅತ್ ಮಾಡುವೆನು. ಅಲ್ಲಾಹನಾಣೆ ಅಬೂಬಕರ್‌ರನ್ನು ಬೈಅತ್ ಮಾಡಿದುದು ಉದ್ದೇಶಪೂರ್ವಕವಾಗಿರದೆ ಅಸ್ತವ್ಯಸ್ತತೆಯ ಪರಿಸ್ಥಿತಿಯಲ್ಲಾಗಿತ್ತು ಎಂದು ಹೇಳಿದರು. ಆ ಮಾತನ್ನು ಆಲಿಸಿ ಹಝ್ರತ್ ಉಮರ್‌ರಿಗೆ ದುಃಖವಾಯಿತು. ಅವರು ಹೇಳಿದರು: ಅಲ್ಲಾಹನಿಚ್ಛಿಸುವುದಾದರೆ ನಾನು ಜನರ ಮಧ್ಯೆ ನಿಂತು ಜನರಿಗೆ ಎಚ್ಚರಿಕೆ ನೀಡುವೆನು. ಇಂತಹ ವಿಷಯಗಳನ್ನು ಬಲಾತ್ಕಾರದಿಂದ ತಮ್ಮ ಕೈಯಲ್ಲಿ ಎತ್ತಿಕೊಳ್ಳುವವರ ಬಗ್ಗೆ.

ಒಮ್ಮೆ ಹಝ್ರತ್ ಉಮರ್(ರ) ಪ್ರವಚನ ವೇದಿಕೆಯಲ್ಲಿ ಅಝಾನ್ ನಂತರ ಅಲ್ಲಾಹನನ್ನು ಸ್ತುತಿಸಿ ಅನಂತರ ಹೇಳಿದರು: ನಾನು ಹೇಳಬೇಕೆಂದು ನಿಶ್ಚಯಿಸಲಾದ ಒಂದು ವಿಷಯ ನಿಮ್ಮೊಂದಿಗೆ ಹೇಳುವೆನು. ನನಗೆ ಸಮಾಚಾರ ಲಭಿಸಿದೆ, ನಿಮ್ಮ ಪೈಕಿ ಒಬ್ಬ ಹೇಳುತ್ತಿದ್ದಾನೆ – ಹಝ್ರತ್ ಅಬೂಬಕರ್‌ರಿಗೆ ಖಿಲಾಫತ್ ಹೇಗೆಯೋ ಲಭಿಸಿತು ಎಂದು. ನನ್ನ ಬಗ್ಗೆಯೂ ಹೇಳಿದ್ದಾನೆ: ಉಮರ್ ಮೃತರಾದರೆ ನಾನು ಇಂತಿಂತಹ ವ್ಯಕ್ತಿಯನ್ನು ಬೈಅತ್ ಮಾಡುವೆನು ಎಂದು. ಆದುದರಿಂದ ಯಾರೂ ತಪ್ಪು ಗ್ರಹಿಕೆಯಿಂದ ಹೀಗೆ ಇಷ್ಟಬಂದಂತೆ ಹೇಳಬಾರದು.

(ಹುಝೂರ್ ಹೇಳಿದರು) ನಾನು ಈ ವಿಷಯ ವಿಶದೀಕರಿಸುತ್ತೇನೆ. ಹಝ್ರತ್ ಉಮರ್(ರ) ಹೇಳಿದರು: ಹಝ್ರತ್ ಅಬೂಬಕರ್‌ರನ್ನು ಅಸ್ತವ್ಯಸ್ತತೆಯ ಪರಿಸ್ಥಿತಿಯಲ್ಲಿ ಅವಸರವಸರವಾಗಿ ತಪ್ಪಾಗಿ ಬೈಅತ್ ಮಾಡಲಾಯಿತು ಎಂದು ಯಾರು ಸಹ ಹೇಳಬಾರದು. ನೋಡಿರಿ, ಹಝ್ರತ್ ಅಬೂಬಕರರನ್ನು ಅಸ್ತವ್ಯಸ್ತತೆಯ ಪರಿಸ್ಥಿತಿಯಲ್ಲಿ ಬೈಅತ್ ಮಾಡಲಾಗಿದ್ದರೂ ಅದನ್ನು ಕೆಡುಕುಗಳಿಂದ ಅಲ್ಲಾಹನು ರಕ್ಷಿಸಿದನು. ನಿಮ್ಮ ಪೈಕಿ ಅಬೂಬಕರ್‌ರ ಹಾಗೆ ಇರುವವರು ಯಾರೂ ಇಲ್ಲ. ಮುಸ್ಲಿಮರೊಂದಿಗೆ ಸಮಾಲೋಚನೆ ನಡೆಸದೆ ಯಾರಾದರೂ ಒಬ್ಬನನ್ನು ಬೈಅತ್ ಮಾಡಿದರೆ ಆ ವ್ಯಕ್ತಿಯನ್ನು ಬೇರೆ ಯಾರೂ ಬೈಅತ್ ಮಾಡಬಾರದು ಮತ್ತು ಬೈಅತ್ ಮಾಡಿದವನನ್ನೂ ಬೈಅತ್ ಮಾಡಬಾರದು. ಅನಂತರ ಹಝ್ರತ್ ಉಮರ್(ರ) ಹೀಗೆ ಸಹ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ಅನ್‌ಸಾರ್‌ಗಳು ನಮ್ಮ ವಿರೋಧಿಗಳಾದರು. ನಾವೆಲ್ಲರೂ ಸಖೀಫ ಬನೂ ಸಾಯಿದದಲ್ಲಿ ಜಮಾಯಿಸಿ ಅಬೂಬಕರ್ ಬಳಿಗೆ ಬಂದೆವು. ನಾನು ಅಬೂಬಕರ್‌ರೊಂದಿಗೆ ಹೇಳಿದೆ, ಬನ್ನಿರಿ ನಾವು ಅನ್‌ಸಾರ್ ಸಹೋದರರನ್ನು ಭೇಟಿಯಾಗಲು ಹೋಗುವ. ಹಾಗೆ ನಾವು ಅನ್‌ಸಾರ್‌ಗಳ ಬಳಿಗೆ ಸಮೀಪಿಸುವಾಗ ಅನ್‌ಸಾರ್‌ಗಳ ಪೈಕಿ ಇಬ್ಬರು ಸಾತ್ವಿಕರನ್ನು ನಾವು ಕಂಡೆವು. ಅವರಲ್ಲೊಬ್ಬ ಹಝ್ರತ್ ಮುಯಿನ್ ಬಿನ್ ಅದೀ ಆಗಿದ್ದರು. ಅವರು ಹೇಳಿದರು: ಮುಹಾಜಿರ್‌ಗಳೇ ನೀವು ಎಲ್ಲಿಗೆ ಹೋಗುತ್ತಿರುವಿರಿ. ನಾವು ಹೇಳಿದೆವು ನಾವು ಅನ್‌ಸಾರ್ ಸಹೋದರರನ್ನು ಕಾಣಲು ಇಚ್ಛಿಸುತ್ತೇವೆ. ಆಗ ಅವರಿಬ್ಬರೂ ಹೇಳಿದರು: ನೀವು ಖಂಡಿತವಾಗಿಯೂ ಅಲ್ಲಿಗೆ ಹೋಗಬೇಡಿರಿ. ನೀವು ಸ್ವತಃ ಸಮಾಲೋಚನೆ ಮಾಡಿರಿ. ನಾನು ಹೇಳಿದೆ, ಅಲ್ಲಾಹನಾಣೆ! ನಾವು ಖಂಡಿತವಾಗಿಯೂ ಅನ್‌ಸಾರ್‌ಗಳ ಬಳಿಗೆ ಹೋಗುವೆವು ಎಂದು ಹೇಳಿ ಮುಂದೆ ಹೋದೆವು. ಬನೂ ಸಾಯಿದದಲ್ಲಿರುವ ಶಾಮಿಯಾನದಲ್ಲಿದ್ದ ಅನ್‌ಸಾರ್‌ಗಳ ಬಳಿಗೆ ಹೋದೆವು. ಅಲ್ಲಿ ಅನ್‌ಸಾರ್‌ಗಳೊಂದಿಗೆ ಸುಧೀರ್ಘ ಚರ್ಚೆ ನಡೆಯಿತು.

ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ), ಖಿಲಾಫತ್ ಚುನಾವಣೆ ಬಗ್ಗೆ ಅನ್ಸಾರ್‌ಗಳೊಂದಿಗೆ ನಡೆಸಿದ ದೀರ್ಘ ಚರ್ಚೆಯ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ನೀಡಿದ್ದಾರೆ. ಅವರು ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದಾಗ ಸಹಾಬರು ಮೂರು ಗುಂಪುಗಳಾಗಿ ವಿಭಜಿಸಲ್ಪಟ್ಟರು. ಅವರಲ್ಲಿ ಒಂದು ಗುಂಪಿನವರ ಅಭಿಪ್ರಾಯ, ನಬಿಯವರ ಇಚ್ಛೆ ಬಗ್ಗೆ ಅವರ ಕುಟುಂಬದವರಿಗೆ ಮಾತ್ರ ಚೆನ್ನಾಗಿ ಮನವರಿಕೆ ಆಗುವುದರಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬದವರಿಂದಲೇ ಒಬ್ಬರನ್ನು ಖಲೀಫರಾಗಿ ಆಯ್ಕೆಮಾಡಬೇಕು ಎಂದಾಗಿತ್ತು. ಆದರೆ ಎರಡನೆಯ ಗುಂಪು ಹೀಗೆ ಅಭಿಪ್ರಾಯ ಹೊಂದಿತ್ತು: ಖಲೀಫರಾಗಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬದವರೇ ಆಗಬೇಕೆಂಬುದು ಆವಶ್ಯಕವಾದ ಶರತ್ತು ಅಲ್ಲ. ರಸೂಲ್ ಕರೀಮರಿಗೆ ಒಬ್ಬ ಉತ್ತರಾಧಿಕಾರಿ ಇರಬೇಕೆಂಬುದೇ ಶರತ್ತಾಗಿದೆ. ಈ ಎರಡನೆಯ ಗುಂಪಲ್ಲಿ ಎರಡು ವಿಭಾಗಗಳಿದ್ದುವು. ಒಂದು ವಿಭಾಗದ ಅಭಿಪ್ರಾಯ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ದೀರ್ಘ ಕಾಲ ತರಬೇತಿ ಪಡೆದವರಲ್ಲಿ ಒಬ್ಬರು ಖಲೀಫರಾಗಬೇಕು ಎಂದಾಗಿತ್ತು. ಅವರ ಪೈಕಿ ಸಹ ಖುರೈಶಿಗಳಿಗೆ ಆದ್ಯತೆ ನೀಡಬೇಕು. ಏಕೆಂದರೆ ಖುರೈಶಿಗಳ ಮಾತು ಅರಬಿಗಳು ಅಂಗೀಕರಿಸಲು ಸಿದ್ಧರಾಗುತ್ತಾರೆ. ಮತ್ತೆ ಕೆಲವರು ಹೀಗೆ ಅಭಿಪ್ರಾಯ ಹೊಂದಿದ್ದರು, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮದೀನದಲ್ಲಿ ನಿಧನ ಹೊಂದಿದರು. ಮದೀನದಲ್ಲಿ ಅನ್ಸಾರ್‌ಗಳು ಪ್ರಬಲರಾಗಿದ್ದಾರೆ. ಆದುದರಿಂದ ಅವರೇ ಖಿಲಾಫತ್ ಕೆಲಸ ಚೆನ್ನಾಗಿ ನಿರ್ವಹಿಸಬಲ್ಲರು. ಈ ಭಿನ್ನಾಭಿಪ್ರಾಯಗಳ ಬಗ್ಗೆ ಇತರರು ಯೋಚಿಸುತ್ತಾ ಇದ್ದು ಅವರು ಯಾವುದೇ ತೀರ್ಮಾನಕ್ಕೆ ತಲಪದೇ ಇದ್ದಾಗಲೇ ಅನ್ಸಾರ್‌ಗಳ ಪರವಾಗಿದ್ದ ಒಂದು ಗುಂಪಿನ ಜನರು ಬನೀ ಸಾಯಿದದಲ್ಲಿ ಒಂದು ಚಾವಡಿಯಲ್ಲಿ ಜಮಾಯಿಸಿ ಆ ವಿಷಯದ ಬಗ್ಗೆ ಸಮಾಲೋಚನೆ ನಡೆಸುತ್ತಾ ಇದ್ದರು. ಖಝ್ರಜ್ ಗೋತ್ರದ ಮುಖಂಡರಲ್ಲಿ ಒಬ್ಬರಾದ ಸಅದ್ ಬಿನ್ ಉಬಾದರನ್ನು ಖಲೀಫರನ್ನಾಗಿ ಮಾಡುವ ಒಲವು ಅಲ್ಲಿ ಜಮಾಯಿಸಿದವರಲ್ಲಿ ಜನಿಸಿತ್ತು. ಈ ಸಮಾಲೋಚನೆಗಳ ಬಗ್ಗೆ ಮುಹಾಜಿರ್‌ಗಳಿಗೆ ತಿಳಿದಾಗ ಅವರು ಕೂಡಲೇ ಅಲ್ಲಿಗೆ ಹೋದರು. ಯಾಕೆಂದರೆ ಮುಹಾಜಿರ್‌ಗಳಲ್ಲಿ ಒಬ್ಬರು ಖಲೀಫರಾಗದಿದ್ದರೆ ಅನ್ಯ ವ್ಯಕ್ತಿಯನ್ನು ಅರಬಿಗಳು ಅನುಸರಿಸಲಾರರು ಎಂದು ಅವರು ಮನವರಿಕೆ ಮಾಡಿದ್ದರು. ಇಲ್ಲಿ ಪ್ರಶ್ನೆ ಇರುವುದು ಮದೀನದ ಬಗ್ಗೆ ಅಲ್ಲ. ಇಡೀ ಅರಬ್ ದೇಶದ ಬಗ್ಗೆಯಾಗಿದೆ. ಹಝ್ರತ್ ಉಮರ್(ರ) ಹೇಳುತ್ತಾರೆ: ನಾನು ಆ ಸಂದರ್ಭದಲ್ಲಿ ಮಾತನಾಡಲು ದೀರ್ಘವಾದ ವಿಶದೀಕರಣವನ್ನು ಯೋಚಿಸಿದ್ದೆನು. ನಾನು ಅಲ್ಲಿಗೆ ಹೋಗಿ ಎಂತಹ ಭಾಷಣ ಮಾಡುವೆನೆಂದರೆ ಅನ್ಸಾರ್‌ಗಳೆಲ್ಲರೂ ನನ್ನ ಅಭಿಪ್ರಾಯಗಳನ್ನು ಅಂಗೀಕರಿಸುವರು ಎಂದು ಯೋಚಿಸಿದ್ದೆನು. ಆದರೆ ನಾವು ಅನ್ಸಾರ್‌ಗಳ ಬಳಿಗೆ ತಲಪಿದಾಗ ಆಗಲೇ ಹಝ್ರತ್ ಅಬೂಬಕರ್(ರ) ಭಾಷಣ ಮಾಡಲು ಎದ್ದು ನಿಂತಿದ್ದರು. ಅಲ್ಲಾಹನಾಣೆ! ನಾನು ಏನೆಲ್ಲಾ ಯೋಚಿಸಿದ್ದೆನೋ ಅವುಗಳನ್ನೆಲ್ಲಾ ಹಝ್ರತ್ ಅಬೂಬಕರ್(ರ) ತನ್ನ ಭಾಷಣದಲ್ಲಿ ವಿವರಿಸಿದರು. ಅಷ್ಟು ಮಾತ್ರವಲ್ಲ ಅವರು ಮತ್ತೂ ಅನೇಕ ಸಾಕ್ಷ್ಯಾಧಾರಗಳನ್ನು ಸಹ ವಿಶದೀಕರಿಸಿದರು. ಆಗ ನನಗೆ ತಿಳಿಯಿತು ನನಗೆ ಅಬೂಬಕರ್‌ರನ್ನು ಎದುರಿಸಲು ಸಾಧ್ಯವಿಲ್ಲ ಎಂದು. ಹಝ್ರತ್ ಅಬೂಬಕರ್ ಈ ಹದೀಸನ್ನು ಸಹ ನಿವೇದಿಸಿದರು: **ಅಲ್ ಅಇಮ್ಮತು ಮಿನ್ ಖುರೈಶ್.** ಖುರೈಶಿಗಳಿಂದಲೇ ಇಮಾಮರು.

ಆಗ ಹಬ್ಬಾಬ್ ಬಿನ್ ಮುನ್‌ಝಿರ್ ಖಝ್ರಜೀ ವಿರೋಧಿಸಿ ಹೇಳಿದರು: ಮುಹಾಜಿರ್‌ಗಳಿಂದ ಖಲೀಫರನ್ನು ಆಯ್ಕೆ ಮಾಡಬೇಕೆಂಬುದನ್ನು ನಾವು ಅಂಗೀಕರಿಸುವುದಿಲ್ಲ. ನೀವು ನಮ್ಮ ಮಾತು ಅಂಗೀಕರಿಸುವುದಿಲ್ಲವಾದರೆ ಒಬ್ಬ ಅಮೀರ್ ನಿಮ್ಮಿಂದಲೂ ಇನ್ನೊಬ್ಬ ಅಮೀರ್ ನಮ್ಮಿಂದಲೂ ಚುನಾಯಿಸಲ್ಪಡಲಿ. ಆಗ ಹಝ್ರತ್ ಉಮರ್(ರ) ಹೇಳಿದರು: ಚೆನ್ನಾಗಿ ಯೋಚಿಸಿ ಮಾತನಾಡಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದುದು ನಿಮಗೆ ತಿಳಿದಿಲ್ಲವೇ? ಒಂದೇ ಸಮಯದಲ್ಲಿ ಸಮುದಾಯಕ್ಕೆ ಇಬ್ಬರು ನೇತಾರರು ಇರಬಾರದು ಎಂದು.

ಅನಂತರ ಹಝ್ರತ್ ಅಬೂ ಉಬೈದ ಎದ್ದು ನಿಂತು ಅನ್ಸಾರ್‌ಗಳನ್ನು ಸಂಬೋಧಿಸಿ ಹೇಳಿದರು: ಮಕ್ಕದಿಂದ ಹೊರಗೆ ಇಸ್ಲಾಮನ್ನು ಸ್ವೀಕರಿಸಿದ ಪ್ರಥಮ ಸಮುದಾಯ ನಿಮ್ಮದಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಇಸ್ಲಾಮ್ ಧರ್ಮದ ಇಚ್ಛೆಯನ್ನು ಬದಲಾಯಿಸಿದವರಲ್ಲಿ ನೀವು ಪ್ರಥಮರಾಗಬೇಡಿರಿ. ಅವರ ಭಾಷಣ ಅನ್ಸಾರ್‌ಗಳ ಮೇಲೆ ಬಹಳ ಪ್ರಭಾವ ಬೀರಿತು. ಆಗ ಬಶೀರ್ ಬಿನ್ ಸಅದ್ ಖಝ್ರಜಿ ಎದ್ದು ನಿಂತು ಹೇಳಿದರು: ಮುಹಾಜಿರ್‌ಗಳು ಸತ್ಯ ಹೇಳುತ್ತಿದ್ದಾರೆ. ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮಾಡಿದ ಸಹಾಯಗಳು ಮತ್ತು ಸೇವೆಗಳು ಯಾವುದೇ ಲೌಕಿಕ ಲಾಭಗಳಿಸುವ ಉದ್ದೇಶದಿಂದಾಗಿರಲಿಲ್ಲ. ಅವರ ನಂತರ ನಮಗೆ ಅಧಿಕಾರ ಸಿಗಬೇಕೆಂಬ ಉದ್ದೇಶದಿಂದಲೂ ನಾವು ಸೇವೆ ಮಾಡಿರಲಿಲ್ಲ. ನಾವು ಅಲ್ಲಾಹನ ಸಂಪ್ರೀತಿ ಗಳಿಸಲು ಅವರನ್ನು ಅನುಸರಣೆ ಮಾಡಿದೆವು.

ಅನಂತರ ಮತ್ತೂ ಸ್ವಲ್ಪ ಸಮಯ ಚರ್ಚೆ ನಡೆಯಿತು. ಅರ್ಧ–ಮುಕ್ಕಾಲು ಗಂಟೆಯ ನಂತರ ಅನ್ಸಾರ್‌ಗಳು ಹೀಗೆ ನಿರ್ಧರಿಸಿದರು– ಮುಹಾಜಿರ್‌ಗಳಿಂದಲೇ ಒಬ್ಬರನ್ನು ಖಲೀಫರನ್ನಾಗಿ ಆಯ್ಕೆ ಮಾಡಬೇಕು ಎಂದು. ಹಝ್ರತ್ ಅಬೂಬಕರ್‌ರವರು ಹಝ್ರತ್ ಉಮರ್ ಮತ್ತು ಹಝ್ರತ್ ಅಬೂ ಉಬೈದರನ್ನು ಆ ಸ್ಥಾನಕ್ಕೆ ಸೂಚಿಸಿದರು. ಆಗ ಅವರಿಬ್ಬರೂ ಅದನ್ನು ನಿರಾಕರಿಸಿ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರೋಗಬಾಧಿತರಾಗಿದ್ದಾಗ ಯಾರನ್ನು ನಮಾಝ್ ನಿರ್ವಹಿಸಲು ಇಮಾಮ್ ಆಗಿ ನೇಮಿಸಿದ್ದರೋ ಮತ್ತು ಮುಹಾಜಿರ್‌ಗಳಲ್ಲಿ ಯಾರು ಉತ್ತಮರಾಗಿರುವರೋ ಅವರನ್ನು ನಾವು ಬೈಅತ್ ಮಾಡುವೆವು. ಹಾಗೆ ಜನರು ಹಝ್ರತ್ ಅಬೂಬಕರ್‌ರನ್ನು ಬೈಅತ್ ಮಾಡಲು ಪ್ರಾರಂಭಿಸಿದರು. ಹಝ್ರತ್ ಉಮರ್ ಮೊದಲು ಬೈಅತ್ ಮಾಡಿದರು. ಅನಂತರ ಹಝ್ರತ್ ಅಬೂ ಉಬೈದ ಬೈಅತ್ ಮಾಡಿದರು. ಅನಂತರ ಹಝ್ರತ್ ಬಶೀರ್ ಬಿನ್ ಸಅದ್ ಖಝ್ರಜೀ ಬೈಅತ್ ಮಾಡಿದರು. ಅನಂತರ ಔಸ್ ಮತ್ತು ಖಝ್ರಜ್ ಗೋತ್ರದ

ಜನರು ಬೈಅತ್ ಮಾಡಿದರು. ಹಾಗೆ ಸ್ವಲ್ಪ ಸಮಯದಲ್ಲೇ ಸಅದ್ ಮತ್ತು ಹಝ್ರತ್ ಅಲಿ ಹೊರತು ಎಲ್ಲರೂ ಬೈಅತ್ ಮಾಡಿದರು. ಹಝ್ರತ್ ಅಲಿ ಸ್ವಲ್ಪ ದಿನಗಳ ನಂತರ ಬೈಅತ್ ಮಾಡಿದರು. ಕೆಲವು ವರದಿಗಳಲ್ಲಿ ಮೂರು ದಿನಗಳ ನಂತರ ಎಂದೂ ಬೇರೆ ಕೆಲವು ವರದಿಗಳಲ್ಲಿ ಆರು ತಿಂಗಳ ನಂತರ ಎಂದೂ ಪ್ರಸ್ತಾಪಿಸಲಾಗಿದೆ. ಆರು ತಿಂಗಳ ನಂತರ ಎಂಬ ವರದಿಗಳಲ್ಲಿ ಹೀಗೆ ಸಹ ಹೇಳಲಾಗಿದೆ, ಹಝ್ರತ್ ಫಾತಿಮ ರೋಗಬಾಧಿತೆಯಾಗಿದ್ದು ಅವರ ಶುಶ್ರೂಷೆಯಲ್ಲಿದ್ದ ಕಾರಣ ಬೈಅತ್ ಮಾಡಲು ತಡವಾಯಿತು. ಹಝ್ರತ್ ಅಲಿ ಬೈಅತ್ ಮಾಡಲು ಬಂದಾಗ ಹೇಳಿದರು: ಫಾತಿಮ ರೋಗಿಯಾಗಿದ್ದರು. ಅವರನ್ನು ಶುಶ್ರೂಷೆ ಮಾಡುವುದರಲ್ಲಿ ನಿರತನಾಗಿದ್ದ ಕಾರಣ ಬೈಅತ್ ಮಾಡಲು ತಡವಾಯಿತು ಎಂದು.

ಹಝ್ರತ್ ಉರ್ವ ಬಿನ್ ಝುಬೈರ್ ಹೇಳುತ್ತಾರೆ: ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮೃತಪಡಿಸಿದಾಗ ಜನರು ಅಳುತ್ತಾ ಹೇಳಿದರು: ಅಲ್ಲಾಹನಾಣೆ ನಾವು ಅವರಿಗಿಂತ ಮೊದಲು ಮೃತರಾಗಲು ಇಚ್ಛಿಸುತ್ತಿದ್ದೆವು. ಅವರು ಮೃತನಾದ ನಂತರ ನಾವು ಪರೀಕ್ಷೆಗೆ ಪಾತ್ರರಾಗುವೆವೆಂಬ ಭಯವಿತ್ತು. ಆಗ ಹಝ್ರತ್ ಮುಯಿನ್ ಹೇಳಿದರು: ಅಲ್ಲಾಹನಾಣೆ! ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೊದಲು ಮೃತನಾಗಬೇಕೆಂದು ಇಚ್ಚಿಸಲಿಲ್ಲ. ಏಕೆಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಾನು ಮೊದಲು ಅಂಗೀಕರಿಸಿದ ಹಾಗೆಯೇ ಅವರು ಮೃತನಾದ ನಂತರ ಸಹ ಅಂಗೀಕರಿಸುವವನಾಗಬೇಕೆಂದು ನಾನು ಬಯಸಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭವಿಷ್ಯ ನುಡಿದ ಖಿಲಾಫತ್ ಸ್ಥಾಪಿತವಾಗಿದೆ. ಅದನ್ನು ಜಾರಿಯಲ್ಲಿರಿಸುವುದು ಮತ್ತು ಕಪಟ ವಿಶ್ವಾಸಿಗಳ ಮತ್ತು ಧರ್ಮ ತ್ಯಾಗಿಗಳ ಜಾಲದಲ್ಲಿ ಸಿಲುಕಿಕೊಳ್ಳದಿರುವುದು ಆವಶ್ಯಕವಾಗಿದೆ.

ಪ್ರತಿಯೊಬ್ಬ ಅಹ್ಮದಿ ವಿಶ್ವಾಸದ ಈ ಮಟ್ಟವನ್ನು ತನ್ನೊಳಗೆ ಸ್ಥಾಪಿಸಬೇಕು. ಒಂದು ವರದಿ ಪ್ರಕಾರ ಹಝ್ರತ್ ಮುಯಿನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ನಂತರ ಹಝ್ರತ್ ಖಾಲಿದ್ ಬಿನ್ ವಲೀದರ ಜೊತೆ ಸೇರಿ ಧರ್ಮ ತ್ಯಾಗಿಗಳ ಮತ್ತು ವಿದ್ರೋಹಿಗಳ ವಿರುದ್ಧ ಹೋರಾಡಲು ಹೊರಟಿದ್ದರು. ಹಝ್ರತ್ ಖಾಲಿದ್ ಬಿನ್ ವಲೀದ್ ಇನ್ನೂರು ಕುದುರೆ ಸವಾರರ ಜೊತೆಗೆ ಹಝ್ರತ್ ಮುಯಿನರನ್ನು ಯಮಾಮದ ಕಡೆಗೆ ಹೋಗಿ ಯುದ್ಧ ಮಾಡಲು ಪ್ರಥಮ ದಳವಾಗಿ ಕಳುಹಿಸಿದ್ದರು. ಹಝ್ರತ್ ಮುಯಿನ್ ಮತ್ತು ಹಝ್ರತ್ ಝೈದ್ ಬಿನ್ ಖತ್ತಾಬ್ ಮಧ್ಯೆ ಸಹೋದರ ಸಂಬಂಧವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ಥಾಪಿಸಿದ್ದರು. ಅವರಿಬ್ಬರೂ ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಯಮಾಮ ಯುದ್ಧದಲ್ಲಿ ಹಿಜರಿ 12ರಲ್ಲಿ ಶಹೀದರಾದರು.

ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಗೂ ನುಬುವ್ವತ್ತಿನ ಸ್ಥಾನವನ್ನು ಪರಿಚಯಿಸಿಕೊಳ್ಳಲು ಭಾಗ್ಯ ನೀಡಲಿ. ಅದೇರೀತಿ ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧವನ್ನು ಸ್ಥಾಪಿಸಲು ಸಹ ಭಾಗ್ಯ ಗಳಿಸುವಂತೆ ಅಲ್ಲಾಹನು ಮಾಡಲಿ – ಆಮೀನ್.

——————*****——————

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ- عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَاءِ ذِي الْقُرْبٰى وَ يَنْهٰى
عَنِ الْفَحْشَاءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ-


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 23-08-2019*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email****: khutuba.kannada@gmail.com*

**You can find all the Sermons archived at**: www.alislam.org/friday-sermon